ಅ) *ವಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನಲ್ಲಿ ಬರುವ ಕೃಷ್ಣಾ ಯೋಜನೆಯ ಆಡಿಯಲ್ಲಿ ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆ ಮಂಜೂರಾತಿಯ ಕುರಿತು ಸರಕಾರದ ನಿಲುವೇನು? ಈ ಯೋಜನೆಗೆ ಎಷ್ಟು ಹಳ್ಳಿ ಬೇಕಾಗುತ್ತದೆ.*

ಆ) *ಈ ಯೋಜನೆಯು ಪೂರ್ಣಗೊಂಡರೆ ಎಷ್ಟು ಸಾವಿರ ಎಕರೆ ಭೂಮಿ ನೀರಾವರಿಯಾಗುವುದು? ಈ ಯೋಜನೆ ಯಾವಾಗ ಪ್ರಾರಂಭವಾಗುವುದು?*

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಗುತ್ತಿ ಬಸವಣ್ಣ ಏತ ನೀರಾವರಿ ಯೋಜನೆಯು ಕೃಷ್ಣಾ ಮೇಲ್ದಂಡೆ ಯೋಜನೆಯ ಎರಡನೆ ಘಟ್ಟದಲ್ಲಿ ಬರುತ್ತಿದ್ದು ಯೋಜನೆಯನ್ನು ಇಂಡಿ ಏತ ನೀರಾವರಿ ಯೋಜನೆಯೆಂದು ಸಹ ಕರೆಯಲಾಗುತ್ತಿದೆ. ಎರಡನೆ ಘಟ್ಟದ ಯೋಜನೆಗೆ ರಾಜ್ಯದ ತಾಂತ್ರಿಕ ಸಲಹಾ ಸಮಿತಿಯು ಅನುಮೋದನೆ ನೀಡಿದ್ದು ಈ ಯೋಜನೆ ವರದಿಯನ್ನು ಕೇಂದ್ರೀಯ ಜಲ ಆಯೋಗದ ಅನುಮೋದನೆಗಾಗಿ ಸಲ್ಲಿಸಲಾಗುತ್ತಿದೆ. ಈ ಯೋಜನೆಯ ಅಂದಾಜು ವೆಚ್ಚ ರೂ. 337.92 ಕೋಟಿ ರೂ.ಗಳಾಗಿದೆ.

ಆ) ಈ ಯೋಜನೆ ಪೂರ್ಣಗೊಂಡರೆ41,900 ಹೆಕ್ಟೇರ್ ಭೂಮಿ ನೀರಾವರಿಯಾಗುವುದು. ಈ ಯೋಜನೆ ಎರಡನೆ ಘಟ್ಟದಲ್ಲಿ ಅಳವಡಿಸಲಾದ ನೀರಾವರಿ ಯೋಜನೆಗಳಲ್ಲಿ ಒಂದಾಗಿದ್ದು ಘಟ್ಟ ಅಂದಾಜಿಗೆ ಮಂಜೂರಾತಿ ನಂತರ ಶೀಘ್ರವಾಗಿ ಕೈಗೊಳ್ಳಲಾಗುವುದು.

ಮಹರಾಷ್ಟ್ರ ಸರ್ಕಾರದ ಸಂಯೋಜನೆಯೊಂದಿಗೆ ಬ್ಯಾರೇಜುಗಳ ನಿರ್ಮಾಣ.

307 - ಶ್ರೀ ಬಸವಗೌಡ ರಾ ಪಾಟೀಲ್ (ವಿಜಾಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕರ್ನಾಟಕ ಹಾಗೂ ಮಹಾರಾಷ್ಟ್ರ ಸರಕಾರ ಸಂಯೋಜನೆಯೊಂದಿಗೆ ರಾಜ್ಯ ಸರಕಾರದವರು ನಾಲ್ಕು ಬ್ಯಾರೇಜುಗಳು ನಿರ್ಮಾಣ ಮಾಡುವುದರ ಬಗ್ಗೆ ಸರಕಾರದವರ ನಿಲುವೇನು?*

ಆ) *ಈ ವರ್ಷದ ಯೋಜನೆಯಲ್ಲಿ ಬ್ಯಾರೇಜುಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗುವುದು?*

ಇ) *ಈ ಯೋಜನೆಯು ಯಾವಾಗ ಕಾರ್ಯಗತಗೊಳ್ಳುವುದು ಹಾಗೂ ಎಷ್ಟು ವರ್ಷಗಳಲ್ಲಿ ಬ್ಯಾರೇಜುಗಳು ಪೂರ್ಣಗೊಳ್ಳುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆ) :

ಅ) ಕರ್ನಾಟಕ ಹಾಗೂ ಮಹಾರಾಷ್ಟ್ರ ಸರಕಾರಗಳ ಜಂಟಿ ಯೋಜನೆಯಲ್ಲಿ ತಲಾ 4 ಬಂದಾರಗಳನ್ನು (ಬ್ಯಾರೇಜ್) ನಿರ್ಮಿಸಲು ಪ್ರಸ್ತಾಪಿಸಲಾಗಿದೆ. ಕರ್ನಾಟಕ ಸರ್ಕಾರದಿಂದ ಬಿಜಾಪುರ ಜಿಲ್ಲೆ ಇಂಡಿ ತಾಲ್ಲೂಕಿನಲ್ಲಿ (1) ಗೋವಿಂದಪುರ (2) ಚನೇಗಾಂವ (3) ಹಿಂಗಣಿ (4) ಉಮರಾಣಿ ಬಂದಾರುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಆ) ಕಾಮಗಾರಿಗಳು ಮಂಜೂರಾದ ನಂತರ ಹಣ ಬಿಡುಗಡೆ ಮಾಡಲಾಗುವುದು.

ಇ) ಯೋಜನೆಗಳು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಶಕ್ಯವೆಂದು ಕಂಡುಬಂದಲ್ಲಿ ಅನುದಾನದ ಲಭ್ಯತೆಯ ಅನುಸಾರ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.

ಹೆಚ್.ಎ. ಸ್ಯಾನಿಟರಿ ಬೋರ್ಡಿನ ಅವ್ಯವಹಾರ.

309 - ಎಸ್. ರಾಜಣ್ಣ (ಭಾರತೀನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ಹೆಚ್.ಎ.ಸ್ಯಾನಿಟರಿ ಬೋರ್ಡಿನ ವ್ಯಾಪ್ತಿಯಲ್ಲಿರುವ ನಿವೇಶನಗಳು ಹಾಗೂ ಮನೆಗಳ ಸಂಖ್ಯೆ ಎಷ್ಟು?

ಆ) ಈ ಬೋರ್ಡಿನಲ್ಲಿ ಖಾತಾ ನೀಡುವಲ್ಲಿ ದೊಡ್ಡ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಸರ್ಕಾರ ತನಿಖೆ ನಡೆಸಲು ಆದೇಶಿಸುತ್ತಿದೆಯೇ?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ ರಾಜ್ಯ ಸಚಿವರು) :

ಅ) ಹೆಚ್.ಎ. ಸ್ಯಾನಿಟರಿ ಬೋರ್ಡಿನಲ್ಲಿ ಸುಮಾರು 4,500 ನಿವೇಶನಗಳು ಹಾಗೂ ಸುಮಾರು 19,000 ಮನೆಗಳು ಇವೆ.

ಆ) ಹೌದು.

ಇ) ಸಂಬಂಧಪಟ್ಟವರ ವಿರುದ್ಧ ವಿಚಾರಣೆಯನ್ನು ಈಗಾಗಲೇ ಆದೇಶಿಸಿದೆ.

ಬೆಂಗಳೂರು ನಗರದಲ್ಲಿ ನಿರ್ಮಿಸಿರುವ ಅಪಾರ್ಟ್‌ಮೆಂಟಗಳು.

310 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ವಕ್ಫ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಭಾರತೀನಗರ, ಶಾಂತೀನಗರ ಹಾಗೂ ಜಯಮಹಲ್ ವಿಧಾನ ಕ್ಷೇತ್ರಗಳಲ್ಲಿ ಕಳೆದ 5 ವರ್ಷಗಳಿಂದ ಒಟ್ಟು ಎಷ್ಟು ಅಪಾರ್ಟಮೆಂಟ್ಸ್‌ಗಳಿಗೆ ಬೆಂಗಳೂರು ಮಹಾ ನಗರಪಾಲಿಕೆ ಲೈಸೆನ್ಸ್ ನೀಡಿದೆ?

ಆ) ಈ ಲೈಸೆನ್ಸ್ ನೀಡಿರುವುದಕ್ಕಿಂತ ಹೆಚ್ಚು ಅಂತಸ್ತಿನ ಮಹಡಿ ಮನೆಗಳನ್ನು ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಪ್ರದೇಶಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ಕಟ್ಟಲು ಸಾವಿರಾರು ಮರಗಳನ್ನು ಕಡಿದು ಹಾಕಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ಅದಕ್ಕೆ ಬದಲಾಗಿ ಎಷ್ಟು ಗಿಡಗಳನ್ನು ಹೊಸದಾಗಿ ಈ ಜಾಗಗಳಲ್ಲಿ ನೆಡಲಾಗಿದೆ.